ತಂದು ನಮ್ಮಿಬ್ಬರ ಸೊಂಟಕ್ಕೆ ಕಟ್ಟಿದಳು. ಮಾನ್ಯರ ಮುಖ ನನ್ನ ಕೊರಳ ಸಮೀಪಕ್ಕೆ ಬಂದು ನೀರಾಗಂಪನ್ನು ಉಚಿತವಾಗಿ ಸರಬರಾಯಿ ಮಾಡತೊಡಗಿತು. ಅವರನ್ನು ಅನಂತಶಯನ ಗುಡಿಯಲ್ಲಿದ್ದ ಮನೆಯ ಮುಂದಿಳಿಸಿ, ಬಂಧುಗಳು ಸುರಿಯಲಿರುವ ಕೃತಜ್ಞತಾ ಧಾರೆಯನ್ನು ಈಂಟಲು ಸಿದ್ಧನಾದೆ. ಬದಲಿಗೆ ಒಳಗಿಂದ ಜೇನ್ನೊಣಗಳ ಸೈನ್ಯವೇ ಎರಗಿ ಬಂದಿತು. 'ಈತನ್ನ ಮನಿಂದ ಹೊರಹಾಕೀವಿ. ನಮಗೂ ಈತಗೂ ಸಂಬಂಧಿಲ್ಲ. ನಿಮಗ ಕರಕೊಂಡು ಬರೋಕೆ ಯಾರು ಹೇಳಿದ್ದು? ಬೇಕಾರ ನಿಮ್ಮನಿಗೆ ಕರಕೊಂಡು ಹೋಗಿ ಇಟ್ಕೋರಿ' ಎಂದು ಬೀದಿಯಲ್ಲೇ ಕ್ಲಾಸು ಆರಂಭಿಸಿದರು.

ಜನ ಮೂಲತಃ ದುಷ್ಟರಲ್ಲ. ಅವರಲ್ಲೂ ಸಹನೆ ಸಹಾನುಭೂತಿಯ ಸೆಲೆಗಳಿವೆ. ಆದರೆ ಕುಡುಕರೆಂದೊಡನೆ ಅವು ಬತ್ತಿಹೋಗುತ್ತವೆ. ಒಮ್ಮೆ ಬಸ್ಸಲ್ಲಿ ಬರುತ್ತಿದ್ದೆ. ಒಂದು ಹಳ್ಳಿಯಲ್ಲಿ ಜನ ಬಸ್ಸನ್ನು ಅಡ್ಡಗಟ್ಟಿದರು. ತಲೆಗೆ ಪೆಟ್ಟಾಗಿ ನೆತ್ತರು ಒಸರುತ್ತಿದ್ದ ಒಬ್ಬ ಅಜ್ಜನನ್ನು ತುರ್ತಾಗಿ ಆಸ್ಪತ್ರೆಗೆ ತೋರಿಸಬೇಕಾಗಿದೆ ಎಂದು ಬೊಬ್ಬಿರಿಯುತ್ತಿದ್ದರು. ಬಸ್ಸಿಗೆ ನಿಲುಗಡೆ ಇರಲಿಲ್ಲವಾಗಿ ಕಂಡಕ್ಟರ್ ಕದ ತೆರೆಯಲಿಲ್ಲ. ನಾವೆಲ್ಲ ದಬಾಯಿಸಿ ಗಾಯಾಳುವನ್ನು ಹತ್ತಿಸಿಕೊಂಡೆವು. ನಾನು ಸೀಟನ್ನು ಬಿಟ್ಟುಕೊಟ್ಟೆ. ಬಸ್ಸೇ ಕೋರ್ಟಾಗಿ ಮಾರ್ಪಟ್ಟು ವಿಚಾರಣೆ ಶುರುವಾಯಿತು. ಆತ ತನ್ನ ಶರೀರ ತಡೆಯಲಾಗದಷ್ಟು ಪ್ರಮಾಣದಲ್ಲಿ ತೈಲವಿಳಿಸಿದ ಫಲವಿದೆಂದು ಮಾಹಿತಿ ಸಿಕ್ಕಿತು. ಕೂಡಲೇ ಪ್ರಯಾಣಿಕರು ಗಾಯಾಳುವನ್ನು ಕೆಳಗಿಳಿಸಬೇಕೆಂದು ಹೇಳಿದರು. 'ಕುಡಿಯಲು ಶುದ್ಧನೀರು ಒದಗಿಸಲಾಗದ ಸರ್ಕಾರ ಹಳ್ಳಿಹಳ್ಳಿಯ ಕಿರಾಣಿ ಅಂಗಡಿಗಳಲ್ಲಿ ಮದ್ಯ ಸಿಗುವಂತೆ ಮಾಡಿದೆ' ಎಂದು ನಾನು ವಿವರಣೆ ಕೊಡಲೆತ್ನಿಸಿದೆ. ಜನ 'ಈ ಭಾಷಣದವನಿಗೂ ಇಳಿಸಿ' ಎಂದರು. ಧರೆಹತ್ತಿ ಉರಿದರೆ ನಿಲುವುದಾದರೂ ಎಲ್ಲಿ?

ಆದರೆ ಕುಡುಕರೆಲ್ಲ ದಡ್ಡರಲ್ಲ. ಅವರಲ್ಲಿ ಬದುಕುಳಿವ ಅಪಾರ ಜಾಣ್ಮೆಯಿದೆ. ಕರ್ನಾಟಕದ ಪಾನಪ್ರಿಯ ಮಂತ್ರಿಯೊಬ್ಬರು, ಚತುರಮಾತುಗಾರಿಕೆಗೂ ಹಾಸ್ಯಪ್ರಜ್ಞೆಗೂ ಹೆಸರಾಗಿದ್ದನ್ನು ನಾಡು ಬಲ್ಲದು. ಗುರುಗಳಾದ ಪ್ರಭುಶಂಕರ್ ಕತೆಯೊಂದನ್ನು ಹೇಳುತ್ತಿದ್ದರು. ಧರ್ಮಗುರುವೊಬ್ಬ, ಹೊಸತಾಗಿ ಧರ್ಮಸ್ವೀಕಾರ ಮಾಡಿದ ಕುಡುಕರಿಗೆ ಕುಡಿತದ ದುಷ್ಪರಿಣಾಮ ತಿಳಿಸಿಕೊಡಲು ಉಪಾಯಗೈಯುವ ಕತೆಯದು. ಗುರು, ಸೆರೆತುಂಬಿದ ಗಾಜಿನಲೋಟಕ್ಕೆ ಹುಳುವೊಂದನ್ನು ಹಾಕಿ, ಅದು ವಿಲವಿಲಿಸಿ ಸಾಯುವುದನ್ನು ತೋರಿಸುತ್ತ 'ಇದು ಏನನ್ನು ಸೂಚಿಸುತ್ತಿದೆ?' ಎಂದು ಕೇಳುತ್ತಾನೆ. ಅದಕ್ಕೆ ಕುಡುಕ ತಕ್ಷಣ ಹೇಳುತ್ತಾನೆ: 'ಅಷ್ಟು ತಿಳಿಯೋದಿಲ್ಲವಾ ಸ್ವಾಮೀ? ಕುಡಿದರೆ ಹೊಟ್ಟ್ಯಾಗಿರೊ ಹುಳಾಯೆಲ್ಲ ಸತ್ತೋಯ್ತುವೆ'. ಧರ್ಮಗುರು ಸಾರಾಯಿಯಲ್ಲಿರುವ ಸ್ಪಿರಿಟ್ಟಿಗೆ ಬೆಂಕಿಹಚ್ಚಿ ಇಂಥದೇ ಪ್ರಶ್ನೆ ಕೇಳಿದ್ದರೆ, ಕುಡಿತದಿಂದ ಪಾಪವೆಲ್ಲ ಭಸ್ಮವಾಗುತ್ತದೆ ಎಂದು ಜವಾಬು ಬಂದಿರುತ್ತಿತ್ತು. ವ್ಯಸನಕ್ಕೆ ಬಿದ್ದವರನ್ನು ಮೇಲೆತ್ತುವುದು ಕಷ್ಟ. ಕುಡಿತ ಬಿಡಿಸಲು ಧರ್ಮದ ಹಾದಿಗೆ ಹಚ್ಚುವ ವಿಧಾನವೇ ಸರಿಯಲ್ಲ. ಕಾರಣ, ಧರ್ಮವು ಸೆರೆಗಿಂತ ಕಟುವಾದುದು. ಇದನ್ನು 'ಮುಳ್ಳೊಳು ಮುಳ್ಳಂ ಪಾಟಿಸುವ' ತಂತ್ರವೆಂದು ಯಾರಾದರೂ ವಾದಿಸಬಹುದು. ಆದರೆ ಈ ತಂತ್ರ ಶೋಚನೀಯವಾಗಿ ಸೋತು ಪಾನಿಗಳು ಗೆದ್ದಿದ್ದಾರೆ. ಅದಕ್ಕೆಂದೇ ಈಚೆಗೆ ವ್ಯಸನಿಗಳನ್ನು ಸುಧಾರಿಸಲು ಧಾರ್ಮಿಕವಲ್ಲದ ಚಟಮುಕ್ತಿ ಕೇಂದ್ರಗಳು ಹುಟ್ಟಿವೆ. ಕಾಡುವ ಮಕ್ಕಳನ್ನು ಶಾಲೆಗೆ ದಬ್ಬಿ ನಿರಾಳವಾಗುವಂತೆ, ಪಾನಿಗಳಿಂದ ರೋಸಿಹೋಗಿರುವ ಕುಟುಂಬಗಳು, ಅವರನ್ನು ಕೇಂದ್ರಗಳಿಗೆ ದಾಖಲಿಸಿ ಕಣ್ತುಂಬನಿದ್ದೆ ಮಾಡುವರು. ಆದರೆ ವ್ಯಸನಿಗಳು ಅಲ್ಲೂ ಕೈಚಳಕ